## ಅನುವಾದಿತ ಕತೆ



ಮುಂದಿನ ಎರಡು ದಿನಗಳು ನೆಮ್ಮದಿಯಿಂದ ಕಳೆದವು. ನಾನು, ಬಿಯರ್ ಮತ್ತು ಜೀತರಾಮ ತಯಾರಿಸುತ್ತಿದ್ದ ಬಾಡೂಟ. ಚಿಕನ್ ಮತ್ತು ಫಿಶ್ ಗಡದ್ದಾಗಿ ತಿಂದ ನಂತರ ಒಳಗಿನ ಹಿಂಜರಿತ ಕಡಿಮೆಯಾಯಿತು.

ಭಾನುವಾರವಾಗಿತ್ತು. ನಾನು ತೋಟದಲ್ಲಿ ಬಿಸಿಲು ಕಾಯಿಸುತ್ತಾ ಹಳೆಯ ಜೇಮ್ಸ್ ಹ್ಯಾಡ್ಲಿ ಚೇಸ್‌ನ ನಾವೆಲ್ ಓದುತ್ತಿದ್ದೆ. ಒಬ್ಬರು ಲೇಡಿ ನಿಮ್ಮನ್ನು ಭೇಟಿಯಾಗಲು ಬಂದಿದ್ದಾರೆ ಎಂದು ಜೀತಾರಾಮ ಹೇಳಿದ. ಲೇಡಿ ಶಬ್ದ ಕಣ್ಣುಗಳೆದುರು ಮೂಡಿತು, ನನ್ನೊಳಗೆ ಒಂದು ರೀತಿಯ ಕಂಪನವುಂಟಾಯಿತು...

ಕೋಣೆಯೊಳಗೆ ನುಗ್ಗುತ್ತಲೇ ಲೇಡಿಯನ್ನು ನೋಡಿ ನನ್ನ ಕಾಲುಗಳು ಅಲ್ಲಿಯೇ ನಿಂತವು.

ಓಹ್ ಸರಿತಾ...

ಲಾಲ್ ಶಿಫಾನ್ ಸೀರೆ, ಬಣ್ಣ ಹಚ್ಚಿದ ತಲೆಕೂದಲು, ಜಡೆಗೆ ದಾಸವಾಳದ ಹೂವು. ತುಟಿಗಳಿಗೆ